# ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 52 ಅಮುಕಾ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:16.02.2021

## ಸುತ್ತೋಲೆ

ವಿಷಯ: ಕೇರಳ ರಾಜ್ಯದಿಂದ ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯದ ಇತರ ಜಿಲ್ಲೆಗಳಿಗೆ ಭೇಟಿ ನೀಡುವ /ಬರುವವರಿಗಾಗಿ ವಿಶೇಷ ಸರ್ವೇಕ್ಷಣಾ ಚಟುವಟಿಕೆಗಳು – ತಕ್ಷಣದಿಂದಲೇ ಜಾರಿಗೆ ಬರುವಂತೆ.

ಉಲ್ಲೇಖ: ಕೋವಿಡ್ 19 ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ 74ನೇ ಸಭಾ ನಡಾವಳಿಗಳ ಅನ್ವಯ, ದಿನಾಂಕ: 13.02.2021.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಕೋವಿಡ್–19 ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನ ಅನ್ವಯ, ಈ ಕೆಳಕಂಡ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ:

1. ಯಾವುದೇ ಹಾಸ್ಟೆಲ್‌ಗಳು, ವಸತಿ ಶಾಲೆಗಳು ಹಾಗೂ ಶಾಲೆಗಳಲ್ಲಿ 5 ಹಾಗೂ ಅದಕ್ಕಿಂತ ಹೆಚ್ಚು ಕೋವಿಡ್ 19 ಪ್ರಕರಣಗಳು ವರದಿಯಾದಲ್ಲಿ, "ಸ್ಥಳೀಯ ಆರೋಗ್ಯ ಪ್ರಾಧಿಕಾರ"ವು, ಸದರಿ ಸ್ಥಳವನ್ನು"ಕಂಟೇನ್ಮೆಂಟ್ ವಲಯ" ವೆಂದು ಘೋಷಿಸಿ, ವಿಶೇಷ ಸರ್ವೇಕ್ಷಣಾ ಚಟುವಟಿಕೆಗಳನ್ನು ಕೈಗೊಳ್ಳಬೇಕು. "ಕಂಟೇನ್ಮೆಂಟ್ ವಲಯ" ವೆಂದು ಘೋಷಿಸಿದ 7 ದಿನಗಳ ನಂತರ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಗೆ ಪುನಃ ಆರ್‌ಟಿ –ಪಿಸಿಆರ್ ಪರೀಕ್ಷೆಯನ್ನು ಮಾಡಿಸಬೇಕು.

2. ಹಾಸ್ಟೆಲ್ / ವಸತಿ ಶಾಲೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ,ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳಾದ ಮಾಸ್ಕ್ ಧರಿಸುವುದು, ದೈಹಿಕ ಅಂತರದ ಪಾಲನೆ, ಹ್ಯಾಂಡ್ ಸ್ಯಾನಿಟೈಸರ್ ನ ಬಳಕೆ, ಸೋಂಕಿನ ಲಕ್ಷಣಗಳನ್ನು ಹೊಂದಿದವರ ಮೇಲ್ವಿಚಾರಣೆ,ಇತ್ಯಾದಿ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸದರಿ ಕ್ರಮಗಳ ಪಾಲನೆಯನ್ನು ಖಚಿತ ಪಡಿಸಿಕೊಳ್ಳುವುದು, ಆಯಾ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ.

3. ಕೇರಳ ರಾಜ್ಯದಿಂದ ಕರ್ನಾಟಕ ರಾಜ್ಯದ ಹೊಟೇಲುಗಳು, ರೆಸಾಟು ್ಗಳು, ಹಾಸ್ಟೆಲ್ ಗಳು, ಛತ್ರಗಳು (dormitories) ,ಇತ್ಯಾದಿಗಳಿಗೆ ಭೇಟಿ ನೀಡುವವರು 72 ಗಂಟೆಗಳ ಹಿಂದೆ ನಡೆಸಿದ ಆರ್‌ಟಿ – ಪಿಸಿಆರ್ ಟೆಸ್ಟ್‌ನ ನೆಗೆಟಿವ್ ಸರ್ಟಿಫಿಕೇಟ್ ಅನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.

ಗ್ರಾಹಕರ ಆರ್‌ಟಿ – ಪಿಸಿಆರ್ ಟೆಸ್ಟ್‌ನ ನೆಗೆಟಿವ್ ಸರ್ಟಿಫಿಕೇಟ್ ಅನ್ನು ಪರಿಶೀಲಿಸುವುದು ಮೇಲೆ ತಿಳಿಸಿದ ಸ್ಥಳಗಳ ಮಾಲೀಕರ ಜವಾಬ್ದಾರಿಯಾಗಿರುತ್ತದೆ.

4. ಕೋವಿಡ್ ಪಾಸಿಟಿವ್ ಮಾದರಿ (CT cycle less than 20) ಗಳನ್ನು genomic sequencing ಗಾಗಿ ನಿಮ್ಹಾನ್ಸ್ ,ಬೆಂಗಳೂರು,ಇಲ್ಲಿಗೆ ಕಳುಹಿಸಬೇಕು.

ಪ್ರಸ್ತುತ ಕೋವಿಡ್ ಪರಿಸ್ಥಿತಿಯನ್ನು ಕದಡುವಂತೆ ಮಾಡುವ ಔಟ್‌ಬ್ರೇಕ್‌ಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ, ಮೇಲೆ ತಿಳಿಸಲಾದ ಕ್ರಮಗಳೊಂದಿಗೆ ಈ ಕೆಳಕಂಡ ಮುನ್ನೆಚ್ಚರಿಕಾ ಕ್ರಮಗಳ ಪಾಲನೆಯನ್ನು ಶಿಫಾರಸ್ಸು ಮಾಡಲಾಗಿದೆ.

**೫. ಹಾಸ್ಟೆಲ್‌ಗಳು ಹಾಗೂ ಕಾಲೇಜುಗಳು :**

ಎ) ಹಾಸ್ಟೆಲ್ / ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು, ಕೋವಿಡ್ ನೋಡಲ್ ಅಧಿಕಾರಿಯ ಅನುಮತಿ ಇಲ್ಲದೇ, ಅತಿಥಿ /ಸಂಬಂಧಿಕರನ್ನು ಭೇಟಿ ಮಾಡುವಂತಿಲ್ಲ. ಕಾಲೇಜು /ಹಾಸ್ಟೆಲ್ ಗಳಿಗೆ ಕೇರಳ ರಾಜ್ಯದಿಂದ / ಕೇರಳ ರಾಜ್ಯಕ್ಕೆ ಭೇಟಿ ನೀಡುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಪಟ್ಟ ಪ್ರಾಧಿಕಾರವು ನಿರ್ವಹಿಸಬೇಕು. ಪರಿಸ್ಥಿತಿಯು ಸುಧಾರಿಸುವವರೆಗೂ ಈ ವಿದ್ಯಾರ್ಥಿಗಳು,ಪ್ರತಿ ಬಾರಿ ಕೇರಳ ರಾಜ್ಯಕ್ಕೆ ಭೇಟಿ ನೀಡಿ ಹಿಂದಿರುಗಿದಾಗ, 72 ಗಂಟೆಗಳಿಗೂ ಮೊದಲು ಕೈಗೊಂಡ ಆರ್ ಟಿ –ಪಿ ಸಿ ಆರ್ ಟೆಸ್ಟ್ ರಿಪೋಟ್ ್ ಹೊಂದುವದು ಕಡ್ಡಾಯವಾಗಿರುತ್ತದೆ.

ಬಿ) ತುರ್ತು / ಅಗತ್ಯ ಸಂದರ್ಭಗಳನ್ನು ಹೊರತುಪಡಿಸಿ,ಇನ್ನಾವುದೇ ಸಂದರ್ಭದಲ್ಲಿ ಸಂದರ್ಶಕರು ಹಾಸ್ಟೆಲ್ ಗಳನ್ನು ಪ್ರವೇಶಿಸುವಂತಿಲ್ಲ. ಕೊಠಡಿಗಳಿಂದ ವಸ್ತುಗಳನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ವಿದ್ಯಾರ್ಥಿಗಳು / ಸೆಕ್ಯೂರಿಟಿ ಗಾರ್ಡ್‌ಗಳು ಅಗತ್ಯ ಸಹಕಾರವನ್ನು ನೀಡಬೇಕು.

ಸಿ) ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು ಹಾಗೂ ಗುಂಪು ಗೂಡದಂತೆ ಕ್ರಮವಹಿಸಲು, ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳು ಪ್ರತ್ಯೇಕ ಕೊಠಡಿಗಳಲ್ಲಿ ವಾಸಿಸುವುದು ಉತ್ತಮ.

ಡಿ) ಶಾಲಾ ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳಲ್ಲಿ ಕೋವಿಡ್ ಹರಡುವಿಕೆಗೆ ಕಾರಣವಾಗುವ ಸಂದರ್ಭಗಳನ್ನು ( ಊಟದ ಸಮಯದಲ್ಲಿ ಗುಂಪು ಗೂಡುವುದು,ಹಾಲ್ ಗಳಲ್ಲಿ ಕಾಯುವುದು, ಓದುವ ಕೊಠಡಿಗಳು (reading rooms) , ಒಳಾಂಗಣ ಕ್ರೀಡೆಯ ಸ್ಥಳಗಳು, ಜಿಮ್ನೇಷಿಯಂ ಇತ್ಯಾದಿ) ನಿಯಂತ್ರಿಸಬೇಕು. ವಿದ್ಯಾರ್ಥಿಗಳು ಡೈನಿಂಗ್ ಹಾಲ್ ನಲ್ಲಿ ಗುಂಪು ಸೇರುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆಹಾರ ನೀಡುವ ಸಮಯವನ್ನು ನಿಗದಿಗೊಳಿಸಬೇಕು,

ಈ) ಕೇರಳ ರಾಜ್ಯದಿಂದ, ಕರ್ನಾಟಕದ ಯಾವುದೇ ಭಾಗದ ಶಾಲಾ ಕಾಲೇಜುಗಳಿಗೆ ದೈನಂದಿನವಾಗಿ ಬರುವ ವಿದ್ಯಾರ್ಥಿಗಳು ಪ್ರತಿ 15 ದಿನಗಳಿಗೊಮ್ಮೆ ಆರ್ ಟಿ– ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು.